## ಮಾಸ್ಕ್ ಇದೆಯಲ್ಲ!

ಬಸ್ಸಿನೊಳಗೆ ನುಗ್ಗಿದ ದರೋಡೆಕೋರರು, 'ಎಲ್ಲರೂ ನಿಮ್ಮಲ್ಲಿರೋದನ್ನೆಲ್ಲ ಕೊಟ್ಟು ಬಿಡಿ. ಇಲ್ಲಾಂದ್ರೆ ಕೊರೊನಾ ಇಂಜೆಕ್ಷನ್ ಚುಚ್ಚಿಬಿಡ್ತೀವಿ...' ಎಂದರು. ಪ್ರಯಾಣಿಕರೆಲ್ಲ ತಮ್ಮಲ್ಲಿರುವ ಹಣ, ಒಡವೆಗಳನ್ನು ತೆಗೆದು ಕೊಟ್ಟರು. ಆದರೆ ತಿಮ್ಮ ಮಾತ್ರ ಕೂತಲ್ಲಿಂದ ಮಿಸುಕಾಡಲಿಲ್ಲ. ಅವನ ಸ್ನೇಹಿತ, 'ಲೋ, ತಿಮ್ಮ ನಿನ್ನಲ್ಲಿರೋದನ್ನ ಕೊಡೋ, ಇಲ್ಲದಿದ್ರೆ ಇಂಜೆಕ್ಷನ್ ಚುಚ್ಚಿಬಿಡ್ತಾರೆ' ಎಂದ. 'ನನಗೆಂಥ ಹೆದರಿಕೆ? ನಾನು ಮಾಸ್ಕ್ ಹಾಕ್ಕೊಂಡಿದ್ದೇನಲ್ಲ!' ಅಂದ ತಿಮ್ಮ.

**ಪ್ರಕಾಶ ಎಸ್. ಮನ್ನಂಗಿ**





## ಫೋನ್ ಫಾಲೊ

ಮಗಳನ್ನು ಪೋಲಿ ಹುಡುಗನೊಬ್ಬ ಹಿಂಬಾಲಿಸಿಕೊಂಡು ಬರುತ್ತಿರುವುದನ್ನು ದೂರದಿಂದಲೇ ಕಂಡ ಪರಮೇಶಿ ಮನೆಯ ಗೇಟ್ ಎದುರು ಬುಸುಗುಡುತ್ತ ನಿಂತ. ಮಗಳು ಅಪ್ಪನನ್ನೂ ಗಮನಿಸದೇ ತಲೆ ತಗ್ಗಿಸಿಕೊಂಡು ಫೋನ್‌ನಲ್ಲಿ ಮಾತನಾಡುತ್ತ ಒಳಗೆ ಹೋದಳು. ಗುಂಡನೂ ಅವಳ ಹಿಂದೆ ಹೊರಟ. 'ಏ ಲೋಫರ್, ನಿಲ್ಲೊ... ಎಲ್ಲಿ ಹೋಗ್ತಾ ಇದ್ದೀಯ? ಮನೆತನಕ ಬಂದಿದ್ದೂ ಅಲ್ಲದೆ ಒಳಗೆ ಬೇರೆ ನುಗ್ಗುತ್ತಾ ಇದ್ದೀಯ?' ಎಂದ ಪರಮೇಶಿ. 'ಇಲ್ಲ ಸರ್, ಮನೆಗೆ ಅರ್ಜೆಂಟ್ ಫೋನ್ ಮಾಡ್ಬೇಕು ಫೋನ್ ಕೊಡಿ ಅಂದಳು. ಕೊಟ್ಟೆ... ಮನೆತನಕ ಕೂಗುತ್ತ ಬಂದ್ರೂ ಫೋನ್ ವಾಪಸ್ಸು ಕೊಡ್ತಿಲ್ಲ' ಎಂದ ಗುಂಡ!

**ಭಾಗ್ಯಾ ಅರವಿಂದ**

ಕಲೆ: ಗಣೇಶ್ ಆಚಾರ್ಯ